# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:— ೨೦೦೨—೨೦೦೩ನೇ ಶೈಕ್ಷಣಿಕ ಸಾಲಿಗೆ ವಿಜಾಪುರದ ಅಂಜುಮನ್ ಇ ಇಸ್ಲಾಂ ಶಿಕ್ಷಣ ಮಹಾವಿದ್ಯಾಲಯದ ಬಿ.ಎಡ್ ಕೋರ್ಸಿನ ವಿದ್ಯಾರ್ಥಿ ಪ್ರಮಾಣದ ನಿರ್ಧಾರಣೆ.

ಓದಲಾಗಿದೆ:—(೧) ದಿನಾಂಕ ೦೪—೦೬—೨೦೦೧ ರಂದು ಸಿ ಎ ನಂ.೭೭೦೬:೯೭ರಲ್ಲಿ ಸರ್ವೋಚ್ಚನ್ಯಾಯಾಲಯವು ನೀಡಿರುವ ಆದೇಶ.

(೨) ದಿನಾಂಕ ೨೦—೧೦—೨೦೦೨ ಸಂ: ಇಡಿ ೧ ಯುಎಆರ್‌ಸಿ ೨೦೦೨ರ ಸರ್ಕಾರಿ ಆದೇಶ.

(೩) ದಿನಾಂಕ ೨೧—೧೦—೨೦೦೨ ಸಂ:ಎಫ್.ಕೆಎಆರ್:ಬಿ.ಎಡ್:ಎಸ್‌ಆರ್‌ಒ:ಎನ್‌ಸಿಟಿಇ:೨೦೦೨—೨೦೦೩:೩೦೪೨ರ ಬೆಂಗಳೂರಿನ ಎನ್‌ಸಿಟಿಇಯ ಪ್ರಾದೇಶಿಕ ನಿರ್ದೇಶಕರ ಆದೇಶ.

(೪) ದಿನಾಂಕ ೧—೪—೨೦೦೨ ಸಂ: ಇಡಿ ೧೬೪ ಯುಕೆವಿ ೨೦೦೦ರ ಸರ್ಕಾರಿ ಪತ್ರ.

---

**ಪೀಠಿಕೆ:**

(೧) ಸರ್ವೋಚ್ಚನ್ಯಾಯಾಲಯದ ಸಿ ಎ ನಂ.೭೭೦೬:೯೭ರಲ್ಲಿ ದಿನಾಂಕ ೪—೬—೨೦೦೧ರ ತೀರ್ಪಿನಲ್ಲಿ ನೀಡಿದ ಆದೇಶದನ್ವಯ ವಿಜಾಪುರದ ಅಂಜುಮನ್—ಇ—ಇಸ್ಲಾಂ ಶಿಕ್ಷಣ ಮಹಾವಿದ್ಯಾಲಯದ ಸ್ಥಾಪನೆಗೆ ಪೂರಕವಾಗಿ ಎನ್‌ಸಿಟಿಇ ಅಧಿನಿಯಮದ ೧೯೯೩ರ ೧೪ನೇ ಪ್ರಕರಣದಡಿ ಎನ್‌ಸಿಟಿಇ ಮಾನ್ಯತೆ ಪಡೆಯಲು ಅನುವಾಗುವಂತೆ ಎನ್‌ಸಿಟಿಇ ಪರಿನಿಯಮಾವಳಿ ೧೯೯೫ರ ಪರಿನಿಯಮ ೫(ಇ)ರನ್ವಯ ೨೦೦೨—೨೦೦೩ನೇ ಶೈಕ್ಷಣಿಕಸಾಲಿಗೆ ಅನ್ವಯವಾಗುವಂತೆ ನಿರಾಕ್ಷೇಪಣ ಪ್ರಮಾಣಪತ್ರವನ್ನು ಎನ್‌ಸಿಟಿಇಯ ಎಸ್‌ಆರ್‌ಸಿಗೆ ದಿನಾಂಕ ೦೧—೦೪—೨೦೦೨ರ ಸರ್ಕಾರಿ ಪತ್ರದಲ್ಲಿ ತಿಳಿಸಲಾಗಿತ್ತು.

೨) ಇದನ್ನು ಪ್ರತಿಕ್ರಿಯಿಸಿ ದಿನಾಂಕ ೨೧—೧೦—೨೦೦೨ರ ಆದೇಶದಲ್ಲಿ ವಿಜಾಪುರದ ಅಂಜುಮನ್—ಇ—ಇಸ್ಲಾಂ ಶಿಕ್ಷಣ ಮಹಾವಿದ್ಯಾಲಯಕ್ಕೆ ಒಂದು ವರ್ಷದ ಬಿ.ಎಡ್ ಕೋರ್ಸಿನೊಂದಿಗೆ ಮತ್ತು ನೂರು ವಿದ್ಯಾರ್ಥಿ ಪ್ರಮಾಣದೊಂದಿಗೆ ಕೆಲವು ಷರತ್ತುಗೊಳಪಟ್ಟು ೨೦೦೨—೨೦೦೩ನೇ ಶೈಕ್ಷಣಿಕ ಸಾಲಿಗೆ ಎನ್‌ಸಿಟಿಇಯ ಎಸ್‌ಆರ್‌ಸಿಯು ಮಾನ್ಯತೆ ನೀಡಿದೆ.

೩) ಇದನ್ನಾಧರಿಸಿ ೧೯೯೩ರ ಎನ್‌ಸಿಟಿಇ ಅಧಿನಿಯಮದ ೧೪ನೇ ಪ್ರಕರಣದಡಿ ಎನ್‌ಸಿಟಿಇ ಮಂಜೂರು ಮಾಡುವ ವಿದ್ಯಾರ್ಥಿ ಪ್ರಮಾಣವನ್ನು ೨೦೦೦ನೇ ಕೆ ಎಸ್ ಯು ಅಧಿನಿಯಮದ ೫೯(೧೮)ನೇ ಪ್ರಕರಣದಡಿ ಓದಲಾದ ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ಬಿ.ಎಡ್ ಕೋರ್ಸುಗಳಿಗೆ ವಿದ್ಯಾರ್ಥಿ ಪ್ರವೇಶಕ್ಕೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿ ೧೯೯೮ರ ೨(೧)ನೇ ನಿಯಮದಡಿ ಸರ್ಕಾರವು ವಿಜಾಪುರದ ಅಂಜುಮನ್—ಇ—ಇಸ್ಲಾಂ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿ ಪ್ರಮಾಣವನ್ನು ೨೦೦೨—೨೦೦೩ನೇ ಶೈಕ್ಷಣಿಕ ಸಾಲಿಗೆ ನಿಗಧಿಗೊಳಿಸಿದೆ. ಅಂತೆಯೇ ಈ ಆದೇಶ.

<u>ಸರ್ಕಾರಿ ಆದೇಶ ಸಂಖ್ಯೆ: ಇಡಿ ೧೬೪ ಯುಕೆವಿ ೨೦೦೦, ಬೆಂಗಳೂರು, ದಿನಾಂಕ ೨೬—೧೨—೨೦೦೨</u>

೪) ೨೦೦೦ದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಪ್ರಕರಣ ೫೯(೧೮)ನೇ ಪ್ರಕರಣದೊಂದಿಗೆ ಓದಲಾದ ಕರ್ನಾಟಕ ಬಿ.ಎಡ್ ಕೋರ್ಸುಗಳಿಗೆ ಅಭ್ಯರ್ಥಿಗಳ ಆಯ್ಕೆ ನಿಯಮಗಳು ೧೯೯೮ರ, ೨(೧)ನೇ ನಿಯಮದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ೨೦೦೨—೨೦೦೩ನೇ ಶೈಕ್ಷಣಿಕ ಸಾಲಿಗೆ, ವಿಜಾಪುರದ ಅಂಜುಮನ್—ಇ—ಇಸ್ಲಾಂ ಶಿಕ್ಷಣ ಮಹಾವಿದ್ಯಾಲಯದ ಒಂದು ವರ್ಷದ ಬಿ.ಎಡ್ ಕೋರ್ಸಿನ ವಿದ್ಯಾರ್ಥಿ ಪ್ರಮಾಣವನ್ನು ೧೦೦ (ಒಂದು ನೂರು)ಕ್ಕೆ ನಿಗದಿಗೊಳಿಸಲಾಗಿದೆ.

೫) ದಿನಾಂಕ ೨೦—೧೦—೨೦೦೨ರ ಸರ್ಕಾರಿ ಸಂಖ್ಯೆ: ಇಡಿ ೧ ಯುಎಆರ್‌ಸಿ ೨೦೦೨ರ ಸರ್ಕಾರಿ ಆದೇಶದಲ್ಲಿ ಶಿಕ್ಷಣ ಕಾಲೇಜುಗಳಿಗೆ ವಿದ್ಯಾರ್ಥಿ ಪ್ರವೇಶಕ್ಕೆ ನಿಗದಿಪಡಿಸಲಾದ ಎಲ್ಲಾ ಷರತ್ತುಗಳು ಯಥಾವತ್ತಾಗಿ ಅನ್ವಯವಾಗುತ್ತದೆ.

೬) ಕೇಂದ್ರೀಕೃತ ದಾಖಲಾತಿ ಘಟಕ ವಿಶೇಷಾಧಿಕಾರಿಯವರು ಈ ಆದೇಶದನ್ವಯ ನಿರ್ದಿಷ್ಟಪಡಿಸಲಾದ ವಿದ್ಯಾರ್ಥಿ ಪ್ರಮಾಣದ ಮಿತಿಯಲ್ಲಿ ೧೯೯೮ರ ನಿಯಮಗಳ ನಿಯಮ ೨(ಜಿ)ಯಲ್ಲಿ ನಿಗಧಿಪಡಿಸಿರುವ ಪ್ರಮಾಣದಲ್ಲಿ ಅಭ್ಯರ್ಥಿಗಳನ್ನು ವಿತರಣೆ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

( ಮುದುಗಿಂಡಯ್ಯ )
ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ,
(ವಿಶ್ವವಿದ್ಯಾಲಯ ಮತ್ತು ಸಾಮಾನ್ಯ—೨)

ಇವರಿಗೆ:

೧) ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಇವರಿಗೆ ದಿನಾಂಕ ೦೨—೦೧—೨೦೦೩ರ ರಾಜ್ಯಪತ್ರದಲ್ಲಿ ಪ್ರಕಟಿಸಿ ಇದರ ೧೦೦ ಪ್ರತಿಗಳನ್ನು ಒದಗಿಸಲು ಕೋರಿದೆ.

<u>ಪ್ರತಿ ಇವರಿಗೆ:</u>

೧) ಸಾರ್ವಜನಿಕ ಶಿಕ್ಷಣ ಆಯುಕ್ತರು, ಬೆಂಗಳೂರು—೫೬೦ ೦೦೧
೨) ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶಕರು, ಬಿ ಪಿ ವಾಡಿಯ ರಸ್ತೆ, ಬಸವನಗುಡಿ, ಬೆಂಗಳೂರು—೫೬೦ ೦೦೪.
೩) ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ—೫೮೦ ೦೦೩.
೪) ಸಂಬಂಧಪಟ್ಟ ಶಿಕ್ಷಣ ಕಾಲೇಜುಗಳ ಪ್ರಾಂಶುಪಾಲರು (ಡಿ ಎಸ್ ಇ ಆರ್ ಟಿ) ಮುಖಾಂತರ
೫) ಪ್ರಾದೇಶಿಕ ನಿರ್ದೇಶಕರು, ಎಸ್‌ಆರ್‌ಸಿ ಆಫ್ ಎನ್‌ಸಿಟಿಇ, ೧ನೇ ಮಹಡಿ, ಸಿಎಸ್‌ಡಿ ಬಿಲ್ಡಿಂಗ್, ಎಚ್‌ಎಂಟಿ ಪೋಸ್ಟ್, ಬೆಂಗಳೂರು—೫೬೦ ೦೩೧.
೬) ವಿಶೇಷಾಧಿಕಾರಿ, ಕೇಂದ್ರೀಕೃತ ದಾಖಲಾತಿ ಘಟಕ, ಕಾವೇರಿ ಭವನದ ಎದುರು, ಬೆಂಗಳೂರು—೫೬೦ ೦೦೯.
೭) ಕಡತ ಸಂಖ್ಯೆ: ಇಡಿ ೧ ಯುಎಆರ್‌ಸಿ ೨೦೦೨.

ಎಕ